# ಭಕ್ತಿಪ್ರಿಯ ಶ್ರೀರಾಮಚಂದ್ರ

ಸ್ವಾಮಿ ಆತ್ಮಜ್ಞಾನಂದ

ಸರಳತೆ, ಪ್ರಾಮಾಣಿಕ ಭಕ್ತಿಗೆ ಭಗವಂತನು ಒಲಿದೇ ಒಲಿಯುತ್ತಾನೆ ಎಂಬ ಮಾತನ್ನು ದೃಢೀಕರಿಸುವ ಸ್ಫೂರ್ತಿದಾಯಕ ಕಥೆಯೊಂದು ಇಲ್ಲಿದೆ. ಶ್ರದ್ಧೆಯೊಂದಿದ್ದರೆ ಭಗವಂತನ ದರ್ಶನ ಸಾಧ್ಯ ಎಂಬುದೂ ಇಲ್ಲಿ ಪ್ರತೀತವಾಗಿದೆ. ಲೇಖಕರು ಹಿಂದೆ ‘ವಿವೇಕಪ್ರಭ’ ಸಂಪಾದಕರಾಗಿದ್ದರು. ಪ್ರಸ್ತುತ ಚಂಡೀಗಢ ರಾಮಕೃಷ್ಣ ಮಿಷನ್ನಿನ ಅಧ್ಯಕ್ಷರಾಗಿರುವ ಅವರು ಉತ್ತಮ ಲೇಖಕರೂ ಭಾಷಣಕಾರರೂ ಆಗಿದ್ದಾರೆ.



ಉತ್ತರ ಭಾರತದಲ್ಲಿ ಶ್ರೀರಾಮನವಮಿಯ ಸಮಯದಲ್ಲಿ ಹಾಗೂ ಏಕಾದಶಿಯ ದಿನಗಳಂದು ತುಳಸೀದಾಸರ ‘ರಾಮ ಚರಿತ ಮಾನಸ’ವನ್ನು ಓದುವುದು ಅಥವಾ ‘ರಾಮಕಥಾ’ ಕಾಲಕ್ಷೇಪಗಳನ್ನು ಕೇಳುವುದು ಬಹಳ ಪ್ರಸಿದ್ಧ. ಭಜನೆ, ನಾಮಸ್ಮರಣೆ ಹಾಗೂ ಕೆಲವೊಮ್ಮೆ ನಾಟಕಗಳೊಂದಿಗೆ ಈ ‘ರಾಮಕಥಾ’ ಬಹಳ ಆಕರ್ಷಕವಾಗಿರುತ್ತದೆ. ಸಾವಿರಾರು ಜನರು ಭಕ್ತರು ನಿಷ್ಠೆಯಿಂದ ಇಡೀರಾತ್ರಿ ಇಂತಹ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಾರೆ. ಉತ್ತರಾಖಂಡ ಹಾಗೂ ವಾರಾಣಸಿ-ಪ್ರಯಾಗಗಳ ಪ್ರಸಿದ್ಧ ಸಂತರು ಹಾಗೂ ಪಂಡಿತರು ಇಂತಹ ಕಾರ್ಯಕ್ರಮಗಳಲ್ಲಿ ರಾಮಾಯಣದ ವ್ಯಾಖ್ಯಾನ ಮಾಡುತ್ತಾರೆ. ಸುಶ್ರಾವ್ಯವಾಗಿ ಪಕ್ಕವಾದ್ಯಗಳೊಂದಿಗೆ ಹಾಡುತ್ತ ಮನ ಮುಟ್ಟುವ ಕಥೆಗಳನ್ನು, ಪ್ರಸಂಗಗಳನ್ನು ವಿವರಿಸುತ್ತ ಭಕ್ತಿಯ ಮಹಿಮೆಯನ್ನು ಹಾಗೂ ಶ್ರೀರಾಮಚಂದ್ರನ ಸದ್ಗುಣಗಳನ್ನು ಮಧುರವಾದ ಭಾಷೆಯಲ್ಲಿ ವರ್ಣಿಸುತ್ತಾರೆ. ಯಾವುದೇ ಭೇದಭಾವವಿಲ್ಲದೆ ಎಲ್ಲರೂ ಇಂತಹ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಪುನೀತರಾಗುತ್ತಾರೆ ; ಭಾರತದ ಸಂಸ್ಕೃತಿಯನ್ನು ಅರಿತುಕೊಳ್ಳುತ್ತಾರೆ. ಅಂತಹ ಒಂದು ‘ರಾಮಕಥಾ’ ಪ್ರಸಂಗದಲ್ಲಿ ದಿವಂಗತ ಪೂಜ್ಯ ಸ್ವಾಮಿ ರಾಜೇಶ್ವರಾನಂದಜಿ ಮಹಾರಾಜರು ವಿವರಿಸಿದ ಒಂದು ಘಟನೆ ಇಲ್ಲಿದೆ. ಪ್ರಮುಖ ಸಂಪ್ರ ದಾಯವೊಂದರ ಹಿರಿಯ ಸಂನ್ಯಾಸಿಗಳಾಗಿದ್ದ ಇವರ ಅನೇಕ ಪ್ರವಚನಗಳನ್ನು ಈಗಲೂ ಭಕ್ತರು ಶ್ರದ್ಧೆಯಿಂದ ಆಲಿಸುತ್ತಾರೆ. ಕಥೆಯನ್ನು ಅವರು ಹೇಳಿದಂತೆ ಕೇಳೋಣ:

ಒಂದು ಸಣ್ಣ ಹಳ್ಳಿಯ ಬಡ ಪರಿವಾರದಲ್ಲಿ ಒಬ್ಬ ಬಾಲಕನ ಜನನವಾಯಿತು. ದಿನ ಕಳೆದಂತೆ ಆ ಬಾಲಕ ಬೆಳೆದು ಯುವಕನಾದ. ಅವನಿಗೆ ಇಪ್ಪತ್ತು ವರ್ಷ ವಯಸ್ಸಾಯಿತು. ಹುಡುಗ ಬಹಳ ಸರಳ. ಯಾವುದೇ ದುರ್ಗುಣ, ದುಶ್ಚಟ ಅವನಲ್ಲಿ ಇರಲಿಲ್ಲ. ಬಹಳ ಶುದ್ಧವಾದ ಮನಸ್ಸುಳ್ಳವನಾಗಿದ್ದ. ಓದು, ಬರಹವಾಗಲಿ, ವ್ಯವಸಾಯವಾಗಲಿ ಅವನಿಗೆ ರುಚಿಸಲಿಲ್ಲ. ಕೊಟ್ಟಷ್ಟೂ

ತಿನ್ನುವ ಅಪರೂಪದ ಶಕ್ತಿಯಿತ್ತು ಅವನಿಗೆ! ಮನೆಯಲ್ಲಿ ಅವನಿಗೆ ಅನ್ನ ಹಾಕುವುದೇ ಕಷ್ಟವಾಗುತ್ತ ಬಂತು. ಯಾವಾಗಲೂ ಊಟ ಸಾಲದ ಚಿಂತೆ ಅವನಿಗೆ! ತಾಯಿತಂದೆಯರು ಬಹಳಷ್ಟು ಬುದ್ಧಿವಾದ ಹೇಳಿ ಯಾವುದಾದರೂ ಕಸುಬು ಕಲಿಯುವಂತೆ ಪ್ರಯತ್ನಿಸಿ ವಿಫಲರಾದರು. ಬೇರೆ ಉಪಾಯವಿಲ್ಲದೆ ಜೀವನೋಪಾಯಕ್ಕಾಗಿ ಎಲ್ಲಿಯಾದರೂ ಹೋಗಿ ನೆಲೆಸು ಎಂದು ಮನೆಯಿಂದ ಹೊರಹಾಕಿದರು. ಅಲ್ಲಿ ಇಲ್ಲಿ ವಿಚಾರಿಸುತ್ತ ಒಂದು ಊರಿನ ಬಳಿ ಇದ್ದ ದೇವಸ್ಥಾನಕ್ಕೆ ಬಂದು ತಲುಪಿದ ಹುಡುಗ. ಆ ದೇವಸ್ಥಾನವನ್ನು ನೋಡಿಕೊಳ್ಳುತ್ತಿದ್ದ ಒಬ್ಬ ಹಿರಿಯ ಸ್ವಾಮಿಗಳಿಗೆ ನಮಸ್ಕರಿಸಿ, ತನಗೆ ಅಲ್ಲೇ ಉಳಿದುಕೊಳ್ಳಲು ಅವಕಾಶ ಕೊಡಬೇಕೆಂದು ಕೇಳಿಕೊಂಡ. ಅವರು ಬಹಳ ಕರುಣೆಯಿಂದ ಒಪ್ಪಿದರು. ಕೆಲವೇ ದಿನಗಳಲ್ಲಿ ಆ ಸ್ವಾಮಿಗಳಿಗೆ ಇವನ ತೀರದ ಹಸಿವಿನ ಪರಿಚಯವಾಯಿತು. ಆದರೂ ಅವನ ಸರಳತನವನ್ನು ಕಂಡು, ಅವನಿಗೆ ಆಶ್ರಯ ನೀಡಿದರು; ಶಿಷ್ಯನನ್ನಾಗಿ ಮಾಡಿಕೊಂಡರು. ಕೆಲವೇ ದಿನಗಳಲ್ಲಿ ಏಕಾದಶಿಯ ತಿಥಿ ಬಂತು. '' ಇವತ್ತು ಇಲ್ಲಿ ಅಡುಗೆ ಮಾಡುವುದಿಲ್ಲ; ಎಲ್ಲರೂ ಉಪವಾಸವಿದ್ದು ಶ್ರೀರಾಮನ ನಾಮಸ್ಮರಣೆ ಮಾಡಬೇಕಪ್ಪ'' ಎಂದರು ಸ್ವಾಮೀಜಿ. ಇದನ್ನು ಕೇಳಿ ಆ ಹುಡುಗನಿಗೆ ದಿಗ್ಭ್ರಮೆಯಾಯಿತು. ಅಳುತ್ತ, ತನ್ನಿಂದ ಉಪವಾಸವಿರುವುದು ಅಸಾಧ್ಯ ಎಂದ ಅವನು ನಿವೇದಿಸಿಕೊಂಡ. ಸ್ವಾಮಿಗಳು ಕನಿಕರ ತೋರಿ ಅವನಿಗೆ ಬೇಕಾಗುವ ಸಾಮಗ್ರಿಗಳನ್ನು ಕೊಡಿಸಿ, ಗಂಗೆಯ ತೀರದಲ್ಲಿ ಅಡುಗೆ ಮಾಡಿಕೊಂಡು ತಿನ್ನುವಂತೆ ಅನುಮತಿಯಿತ್ತರು. ಆದರೆ ತಿನ್ನುವ ಮೊದಲು ಶ್ರೀರಾಮಚಂದ್ರನಿಗೆ ನೀಡಿ, ಅನಂತರವಷ್ಟೇ ಆಹಾರ ಸ್ವೀಕರಿಸಬೇಕು ಎಂದು ಗುರುಗಳು ಆದೇಶಿಸಿದರು. ಇವನೂ ಕೂಡ ಒಪ್ಪಿಕೊಂಡು, ವಸ್ತುಗಳನ್ನು ಹೊತ್ತು ಗಂಗೆಯ ತೀರಕ್ಕೆ ಬಂದು, ಎಲ್ಲ ವ್ಯವಸ್ಥೆ ಮಾಡಿಕೊಂಡು ಅಡುಗೆ ಮಾಡಿದ.

ಇನ್ನೇನು, ತಿನ್ನಲು ಪ್ರಾರಂಭ ಮಾಡಬೇಕೆನ್ನುವಷ್ಟರಲ್ಲಿ ಗುರುಗಳ ಆದೇಶ ನೆನಪಿಗೆ ಬಂತು. ಹುಡುಗನು ಜೋರಾಗಿ ಶ್ರೀರಾಮಚಂದ್ರನನ್ನು ಕರೆಯಲು ಪ್ರಾರಂಭಿಸಿದ. ''ಅಡಿಗೆ ಮಾಡಿಯಾಗಿದೆ, ಊಟ ಆರಿ ಹೋಗುವುದು, ಬೇಗನೆ ಬಂದು ಸೇವಿಸು'' ಎಂದು ಪರಿಪರಿಯಾಗಿ ಬೇಡಿಕೊಂಡ. ಇವನ ಸರಳ, ಮುಗ್ಧ ಮನಸ್ಸನ್ನು ಕಂಡು ಮೆಚ್ಚಿದ ಶ್ರೀರಾಮನು ಸೀತೆಯೊಂದಿಗೆ ಪ್ರತ್ಯಕ್ಷನಾಗಿಯೇ ಬಿಟ್ಟ! ಇವನು ನೋಡಿದ! ಇಬ್ಬರು ಬಂದಿದ್ದಾರೆ! ಬೇರೆ ಉಪಾಯವಿಲ್ಲದೆ ಅವರಿಬ್ಬರಿಗೂ ಊಟ ಬಡಿಸಿ, ತಾನು ಉಪವಾಸವಿದ್ದ. ತನಗೆ ಊಟಕ್ಕೇನೂ ಇರಲಿಲ್ಲವಾದರೂ, ಹಾಗೂ ಹೀಗೂ ತಡೆದುಕೊಂಡ.

ಮುಂದಿನ ಏಕಾದಶಿಯಂದು ಹೆಚ್ಚಾಗಿ ಅಡುಗೆ ಮಾಡಿ, ಎರಡು ತಟ್ಟೆಗಳಿಗೆ ಊಟ ಬಡಿಸಿ, ಶ್ರೀರಾಮನನ್ನು ಕರೆಯಲು ಪ್ರಾರಂಭಿಸಿದ. ಈ ಬಾರಿ ಶ್ರೀರಾಮ, ಸೀತೆ ಹಾಗೂ ಲಕ್ಷ್ಮಣ ಇವರು ಪ್ರತ್ಯಕ್ಷರಾದರು. ಇವನಿಗೆ ಕಸಿವಿಸಿ ಪ್ರಾರಂಭವಾಯಿತು. ಉಪಾಯವಿಲ್ಲದೆ ಮೂವರಿಗೂ ಊಟ ಬಡಿಸಿದ. ನಿರ್ದಾಕ್ಷಿಣ್ಯವಾಗಿ ಶ್ರೀರಾಮನನ್ನು ಕೇಳಿದ, ''ಈತ ಯಾರು? ಇವನನ್ನೇಕೆ ಕರೆತಂದೆ?'' ಶ್ರೀರಾಮ ನಗುತ್ತ ಹೇಳಿದ, ''ಇವನು ಲಕ್ಷ್ಮಣ, ನನ್ನ ತಮ್ಮ. ನನ್ನ ಜೊತೆಯಲ್ಲೇ ಯಾವಾಗಲೂ ಇರುತ್ತಾನಪ್ಪಾ!'' ''ಸರಿ, ಹೋಗಲಿ. ಆದದ್ದಾಯಿತು. ಮುಂದಿನ ಏಕಾದಶಿಯಂದು ನೀವು ಎಷ್ಟು ಜನ ಬರುತ್ತೀರೆಂದು ನನಗೆ ಈಗಲೇ ಹೇಳು. ನಿನ್ನನ್ನು ಕರೆದರೆ ನಿನ್ನ ಧರ್ಮಪತ್ನಿ, ತಮ್ಮನನ್ನೂ ಕರೆತಂದೆಯಲ್ಲ!'' ಎಂದು ಆಕ್ಷೇಪಿಸಿದ ಹುಡುಗ. ಶ್ರೀರಾಮ ಮುಗುಳ್ನಗುತ್ತ ಅಂತರ್ಧಾನನಾದ. ಇವನಿಗೆ ಮತ್ತೆ ಉಪವಾಸವೇ ಗತಿಯಾಯಿತು.

ಅದಕ್ಕೂ ಮುಂದಿನ ಏಕಾದಶಿ ಬಂದಾಗ ಇವನು ಸ್ವಾಮಿಗಳನ್ನು ಭೇಟಿಯಾಗಿ, ಹೆಚ್ಚು ವಸ್ತುಗಳನ್ನು ನೀಡಬೇಕೆಂದು ಕೇಳಿಕೊಂಡ. ಮೂರು ಜನ ಬರುತ್ತಿರುವುದಾಗಿ ಅವರಿಗೆ ತಿಳಿಸಿದಾಗ, ಈ ತಿಂಡಿಪೋತನ ಅತಿ ಆಸೆಯೆಂದು ಭಾವಿಸಿ ಅವರು ಇನ್ನೂ ಹೆಚ್ಚು ನೀಡಿದರು. ಈ ಬಾರಿ ಅಡುಗೆ ಮಾಡಿ ಶ್ರೀರಾಮ ನನ್ನು ಕರೆದಾಗ ಜೊತೆಯಲ್ಲಿ ಭರತ, ಶತ್ರುಘ್ನರನ್ನೂ ಕರೆತರಬೇಕೇ! ಇವನಿಗೆ ದಿಕ್ಕು ತೋಚದಾಯಿತು. ಇರುವುದನ್ನು ಬಡಿಸಿ, ತಾನು ಉಪವಾಸವಿರಬೇಕಾಯಿತು. ಈ ಬಾರಿ ಮುನಿಸಿ ಕೊಂಡು ಶ್ರೀರಾಮನನ್ನು ತರಾಟೆಗೆ ತೆಗೆದುಕೊಂಡ. ''ಎಂತಹ ವ್ಯಕ್ತಿ ನೀನು! ಸಭ್ಯತನವೇ ಇಲ್ಲವಲ್ಲ? ಇಬ್ಬರು ಬಂದಿರಿ. ಮತ್ತೆ ಮೂರು ಜನ ಬಂದಿರಿ. ಈಗ ಐದು ಜನ ಬಂದಿರಲ್ಲ! ನಿಮಗೆ ಬೇರೆಲ್ಲೂ ಊಟ ಸಿಗುವುದಿಲ್ಲವೆ?'' ಎಂದ. ಶ್ರೀರಾಮನು ನಗುತ್ತ ಹೇಳಿದ, ''ಇಲ್ಲಪ್ಪ, ಇವರೂ ನನ್ನ ಸಹೋದರರೇ. ಭರತ ಮತ್ತು ಶತ್ರುಘ್ನ ಎಂದು ಇವರುಗಳ ಹೆಸರು. ಇವರನ್ನು ಹೇಗೆ ಬಿಟ್ಟುಬರಲಿ? ನೀನು ಇಷ್ಟು ಚೆನ್ನಾಗಿ ಅಡುಗೆ ಮಾಡುತ್ತೀಯೆ.'' ಇವನಿಗೆ ಬೇರೆ ದಾರಿ ತೋಚದೆ, ಮತ್ತೆ ಉಪವಾಸವೇ ಗತಿಯಾಯಿತು.

ಮತ್ತೆ ಏಕಾದಶಿ ಬಂದಾಗ, ಸ್ವಾಮಿಗಳ ಬಳಿ ಇನ್ನೂ ಹೆಚ್ಚು ದಿನಸಿ ಬೇಕು ಎಂದು ಕೇಳಿಕೊಂಡ ಹುಡುಗ. ಆಗ ಅವರಿಗೆ ಸಂಶಯವುಂಟಾಯಿತು. ಇವನು ಸಾಮಗ್ರಿಗಳನ್ನು ಮಾರುತ್ತಿರಬೇಕು ಎಂದು ಶಂಕಿಸಿ, ದೂರದಿಂದ ಹಿಂಬಾಲಿಸಿದರು. ಇವನು ಗಂಗೆಯ ತಟಕ್ಕೆ ಎಲ್ಲವನ್ನೂ ಕಷ್ಟಪಟ್ಟು ಹೊತ್ತು ತಂದು, ಮರದ ಕೆಳಗೆ ಇಟ್ಟು, ಸುಮ್ಮನೆ ಕೂತುಬಿಟ್ಟ. ಈ ಬಾರಿ ಊಟದ ಸಮಯ ವಾದಂತೆ, ಶ್ರೀರಾಮ ಉಳಿದವರೊಂದಿಗೆ ಆಂಜನೇಯ, ಜಾಂಬವಂತರನ್ನೂ ಕರೆತಂದ! ಹುಡುಗ ಕೋಪಿಸಿಕೊಂಡು, ''ನೀವೇ ಅಡುಗೆ ಮಾಡಿಕೊಳ್ಳಿ! ನನ್ನಿಂದ ಇನ್ನು ಸಾಧ್ಯವಿಲ್ಲ. ಇಲ್ಲೇ ಎಲ್ಲ ದಿನಸಿಗಳಿವೆ '' ಎಂದ. ಶ್ರೀರಾಮ ಮುಗುಳ್ನಕ್ಕು, ಭರತನಿಗೆ ಅಡುಗೆಯ ವ್ಯವಸ್ಥೆ ನೋಡಿಕೊಳ್ಳುವಂತೆ ಹೇಳಿದ.

ಇವನು ಹೀಗೆ ಸೋಮಾರಿಯಂತೆ ಕುಳಿತಿದ್ದುದನ್ನು ಕಂಡು, ಸ್ವಾಮಿಗಳಿಗೆ ತಡೆಯಲಾಗದೆ, ಅವರು ಬಯ್ಯತೊಡಗಿದರು.

ಅವರಿಗೆ ಶ್ರೀರಾಮ ಹಾಗೂ ಅವನೊಂದಿಗೆ ಬಂದಿದ್ದ ಪರಿವಾರದವರು ಯಾರೂ ಕಾಣಿಸುತ್ತಿರಲಿಲ್ಲ. ತಿಂಡಿಪೋತ ಶಿಷ್ಯ ಅವರಿಗೆ ಮತ್ತೆ ಮತ್ತೆ ತೋರಿಸಿದರೂ ಅವರಿಗೆ ದರ್ಶನಭಾಗ್ಯವಿರಲಿಲ್ಲ. ಶಿಷ್ಯನು ಕಂಗಾಲಾಗಿ ಅಳಲು ಪ್ರಾರಂಭಿಸಿದ. 'ನಾನು ಕಳ್ಳ ಎಂದೆನಿಸಿಕೊಳ್ಳಬೇಕಾಯಿತಲ್ಲ' ಎಂದು ಅವನು ಶ್ರೀರಾಮನನ್ನು ನಿಂದಿಸತೊಡಗಿದ. ''ಗುರುಗಳಿಗೆ ದರ್ಶನ ನೀಡಿ; ನೀವುಗಳು ಅವರ ಎದುರಿಗೆ ಕಾಣಿಸಿಕೊಳ್ಳದಿದ್ದರೆ ನಿಮ್ಮನ್ನು ಊಟ ಮಾಡಲು ಬಿಡಲಾರೆ'' ಎಂದು ಅವನು ಭಯ ತೋರಿಸಿದ. ಗುರುಗಳ ಮನಸ್ಸು ಅಷ್ಟು ಸರಳವಲ್ಲ ಎಂದು ಶ್ರೀರಾಮನು ಹೇಳಿದ. ಆದರೆ ಶಿಷ್ಯ ಅದನ್ನೆಲ್ಲ ಕೇಳಲು ಸಿದ್ಧನಿರಲಿಲ್ಲ. ಬೇರೆ ಉಪಾಯವಿಲ್ಲದೆ ಈ ಶಿಷ್ಯನ ಅಪಾರ ಭಕ್ತಿಗೆ ಮೆಚ್ಚಿದ ಶ್ರೀರಾಮ ಗುರುಗಳಿಗೆ ದರ್ಶನ ನೀಡಿದ. ಅವರ ಜೀವನ ಸಾರ್ಥಕವಾಯಿತು. ಅವರು ಆನಂದಬಾಷ್ಪ ಸುರಿಸುತ್ತ ಶಿಷ್ಯನಿಗೆ ಹೇಳಿದರು, ''ನಿನ್ನ ಸರಳ ಭಕ್ತಿಯಿಂದ ನನಗೂ ಭಗವಂತನ ದರ್ಶನ ದೊರೆಯಿತು. ಗುರುವಿನ ಕೃಪೆಯಿಂದ ಶಿಷ್ಯನಿಗೆ ದರ್ಶನವಾಗುತ್ತದೆ ಎಂದು ಶಾಸ್ತ್ರ ಹೇಳುತ್ತದೆ. ಆದರೆ ಇಂದು ನಿನ್ನ ಪ್ರಾರ್ಥನೆಯಿಂದ ಗುರುವಿಗೆ ಕೃಪೆಯಾಯಿತು! ನೀನು ಧನ್ಯ. ನಿನ್ನಂತಹ ಶಿಷ್ಯನನ್ನು ಪಡೆದು ನಾನು ಧನ್ಯನಾದೆ. ಶ್ರೀರಾಮಚಂದ್ರನ ಸೇವೆ ಮಾಡಿ ನೀನು ಪವಿತ್ರನಾಗಿರುವೆ. ನಿನ್ನೊಂದಿಗೆ ಇರುವುದೇ ಪುಣ್ಯ. ನೀನು ನಮ್ಮ ದೇವಸ್ಥಾನದಲ್ಲೇ ಸುಖವಾಗಿರಪ್ಪ!'' ಹೀಗೆಂದ ಅವರು ಅವನನ್ನು ಆಶೀರ್ವದಿಸಿದರು.

ಏಕಾದಶಿಯಂದು ಮಾಡಿದ ಉಪವಾಸದ ಫಲವಿದು ಎಂದು ಆ ಸ್ವಾಮಿಗಳು ಇದರ ವ್ಯಾಖ್ಯಾನ ಮಾಡಿದ್ದರು. ಶ್ರೀರಾಮಕೃಷ್ಣ ಪರಮಹಂಸರು ಸರಳ ನಿಷ್ಕಪಟ ಭಕ್ತಿಯನ್ನು ಕೊಂಡಾಡಿದ್ದಾರೆ. ಇಂತಹ ದೃಷ್ಟಾಂತಗಳನ್ನು ಅವರೂ ಹೇಳುತ್ತಿದ್ದರು. ಭಗವಂತನು ಒಲಿದರೆ ಏನು ತಾನೇ ಅಸಾಧ್ಯ? ಎಲ್ಲ ನಿಯಮಗಳನ್ನೂ ಅವನೇ ಮಾಡಿರುವುದರಿಂದ, ಬೇಕೆಂದಾಗ ಅದನ್ನು ಬದಿಗಿರಿಸುವುದೂ ಅವನಿಗೆ ಸಾಧ್ಯ. ರಾಜನು ತಾನೇ ಮಾಡಿದ ಕಾನೂನುಗಳನ್ನು ಅಳಿಸಿ ಹಾಕಿದಂತೆ ಇದು — ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಏಸುಕ್ರಿಸ್ತನೂ ಹೇಳುತ್ತಾನೆ, ''ಮಕ್ಕಳಂತೆ ಸರಳರಾಗದಿದ್ದರೆ ನಮಗೆ ಭಗವಂತನ ಸಾನ್ನಿಧ್ಯ ದೊರೆಯದು.'' ದಿವ್ಯತ್ರಯರ ಜೀವನ ಇಂತಹ ಸರಳ ಭಕ್ತಿಗೆ ನಿದರ್ಶನ. ಅವರಲ್ಲಿ ಶರಣಾಗತರಾದವೇ ಧನ್ಯರು. ,

## ವಾರಾಣಸಿಯಲ್ಲಿ ಶ್ರೀಮಾತೆ

ಸ್ವಾಮಿ ಬ್ರಹ್ಮಾನಂದರು ೧೯೧೨ರಲ್ಲಿ ಕಂಖಲ್ ಆಶ್ರಮದಲ್ಲಿ ದುರ್ಗಾಪೂಜೆ ಮಾಡಲು ಹೊರಟಿದ್ದರು. ಸ್ವಾಮಿ ಶಿವಾನಂದರು, ಸ್ವಾಮಿ ತುರೀಯಾನಂದರು ಹಾಗೂ ಕೇದಾರ್ ಬಾಬಾ (ಸ್ವಾಮಿ ಅಚಲಾನಂದರು) ಕೂಡ ಅಲ್ಲಿಗೆ ಹೋಗಿದ್ದರು. ದುರ್ಗಾಪೂಜೆ ಮುಗಿದ ಕೂಡಲೇ ಶ್ರೀಮಾತೆಯವರು ವಾರಾಣಸಿಗೆ ಭೇಟಿಕೊಡುವರೆಂದು ತಿಳಿದುಬಂತು. ಅದನ್ನು ಕೇಳಿದ ಬ್ರಹ್ಮಾನಂದರು ವಾರಾಣಸಿಯಲ್ಲಿ ಕಾಳೀಪೂಜೆ ಮತ್ತು ಜಗದ್ಧಾತ್ರೀ ಪೂಜೆಗೆ ಸಿದ್ಧತೆ ನಡೆಸತೊಡಗಿದರು. ಈ ಬಾರಿ ಶ್ರೀಮಾತೆಯವರು ಕಾಶಿಯಲ್ಲಿದ್ದಾಗಲೇ ಈ ಪೂಜೆಗಳು ನಡೆದವು. ಜಗದ್ಧಾತ್ರೀ ಪೂಜೆಯಲ್ಲಿ 'ಜೀವಂತ ದುರ್ಗೆ' ಶ್ರೀಮಾತೆಯವರು ಬಂದು ಪುಷ್ಪಾಂಜಲಿ ನೀಡುವಾಗ ಅಲ್ಲಿ ದೈವೀ ಸಾನ್ನಿಧ್ಯವು ಎಲ್ಲರ ಅನುಭವಕ್ಕೆ ಬಂದು, ಎಲ್ಲರೂ ಪಾವಿತ್ರ್ಯದ, ಧನ್ಯತೆಯ ಭಾವವನ್ನು ಹೊಂದುತ್ತಿದ್ದರು.

ಒಂದು ಸಲ ಶ್ರೀಮಾತೆಯವರಿಗೆ ವಾರಾಣಸಿ ಸೇವಾಶ್ರಮದಲ್ಲಿ ತಂಗಿದ್ದ ಶ್ರೀರಾಮಕೃಷ್ಣರ ಶಿಷ್ಯಂದಿರಿಗೆ ಊಟ ಮಾಡಿಸಬೇಕೆಂದು ಇಚ್ಛೆಯಾಯಿತು. ಅವರ ಆಹ್ವಾನದ ಮೇರೆಗೆ ಸ್ವಾಮಿ ಬ್ರಹ್ಮಾನಂದ, ಸ್ವಾಮಿ ಶಿವಾನಂದ ಮತ್ತು ಸ್ವಾಮಿ ತುರೀಯಾನಂದರು ಶ್ರೀಮಾತೆಯವರು ತಂಗಿದ್ದ 'ಲಕ್ಷ್ಮೀನಿವಾಸ'ಕ್ಕೆ ಹೋದರು. ಅಲ್ಲಿ ಸ್ವಾಮಿ ಬ್ರಹ್ಮಾನಂದರು ಶ್ರೀಮಾತೆಯವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಹೇಳಿದರು, ''ಅಮ್ಮಾ, ನಮ್ಮದೊಂದು ಪ್ರಾರ್ಥನೆ. ಮೊದಲು ನೀವೇ ಊಟ ಮಾಡಿ. ಆಗ ನಿಮ್ಮ ಪ್ರಸಾದವನ್ನು ನಾವು ಸ್ವೀಕರಿಸಬಹುದು.'' ಗೋಲಾಪ್ ಮಾ ಮೂಲಕ ಶ್ರೀಮಾತೆ ಹೀಗೆ ಹೇಳಿದರು: ''ರಾಖಾಲನಿಗೆ ಹೇಳು. ಮೊದಲು ಮಕ್ಕಳಿಗೆ ತಿನ್ನಿಸದೆ ಒಬ್ಬಳು ತಾಯಿ ತಾನೇ ತಿನ್ನಬಹುದೆ? ನನ್ನ ಮಕ್ಕಳು ಊಟ ಮಾಡಿದ ಮೇಲೆ ನಾನು ಊಟ ಮಾಡುತ್ತೇನೆ. ಅನಂತರ ಎಲ್ಲರೂ ಪ್ರಸಾದ ಸ್ವೀಕರಿಸಬಹುದು.'' ಮೂವರು ಸಂನ್ಯಾಸಿ ಮಕ್ಕಳೂ ಊಟಕ್ಕೆ ಕುಳಿತರು. ಶ್ರೀಮಾತೆಯವರು ಅಕ್ಕರೆಯಿಂದ ಅವರಿಗೆ ಬಡಿಸಿದರು ಹಾಗೂ ಊಟವಾದ ಮೇಲೆ ಅವರಿಗೆಲ್ಲ ಒಂದು ರೂಪಾಯಿ ದಕ್ಷಿಣೆ ನೀಡಿ, ಹೊಸ ವಸ್ತ್ರವನ್ನೂ ಕೊಟ್ಟರು.

ಸ್ವಾಮಿ ಬ್ರಹ್ಮಾನಂದರ ಸಂತೋಷಕ್ಕೆ ಪಾರವೇ ಇರಲಿಲ್ಲ. ವಸ್ತ್ರವನ್ನು ಪಡೆದ ಕೂಡಲೇ ಅವರು ಅದನ್ನು ತಲೆಗೆ ಸುತ್ತಿಕೊಂಡು, ಚಪ್ಪಾಳೆ ತಟ್ಟುತ್ತಾ ನರ್ತಿಸತೊಡಗಿದರು. ಅವರೊಂದಿಗೆ ಸ್ವಾಮಿ ಶಿವಾನಂದರೂ ಸೇರಿಕೊಂಡರು. ಶ್ರೀಮಾತೆಯವರು ಈ ದೃಶ್ಯವನ್ನು ನೋಡುತ್ತ ಆನಂದಿಸಿದರು. *(ಸಂಗ್ರಹ: 'In the Divine Realm' ಗ್ರಂಥದಿಂದ)*